# ಉಪತಹಶೀಲ್ದಾರವರ ನ್ಯಾಯಾಲಯ ನಾಡ ಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾ.ಕ.ಹೊ/04/2015-16. ದಿನಾಂಕ:16-04-2015.

| ಅರ್ಜಿದಾರರು | ತಕರಾರುದಾರರು |
|---|---|
| 1)ಜಿ.ಕೆ.ಮಹೇಶ ತಂದೆ ಲೇಟ್ ಜಿ.ಚಿತ್ತಪ್ಪ<br>2)ಗೊಲ್ಲರ ಈರಪ್ಪ ತಂದೆ ಗೊಲ್ಲರ ಈರಪ್ಪ<br>ಎಂ.ಬಿ.ಅಯ್ಯನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ಶ್ರೀಮತಿ. ಮಾರೆಕ್ಕ ಗಂಡ ಪೆನ್ನಪ್ಪ<br>ಎಂ.ಬಿ.ಅಯ್ಯನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಬೆಳ್ಳಿಕಟ್ಟೆ ಗ್ರಾಮದ ಸನಂ 401/3. ವಿಸ್ತೀರ್ಣ 2-50. ಎಕರೆ ಜಮೀನಿನ ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಬೆಳ್ಳಿಕಟ್ಟೆ ಗ್ರಾಮದ ಸನಂ 401/3. ವಿಸ್ತೀರ್ಣ 2-50. ಎಕರೆ ಜಮೀನಿನ ಸದರಿ ತಾಲೂಕು ಎಂ.ಬಿ.ಅಯ್ಯನಹಳ್ಳಿ ಗ್ರಾಮದ ಗೊಲ್ಲರ ಈರಪ್ಪ ತಂದೆ ಗೊಲ್ಲರ ಈರಪ್ಪ ಇವರಿಂದ ಸದರಿ ತಾಲೂಕು ಎಂ.ಬಿ.ಅಯ್ಯನಹಳ್ಳಿ ಗ್ರಾಮದ ಜಿ.ಕೆ.ಮಹೇಶ ತಂದೆ ಲೇಟ್ ಜಿ.ಚಿತ್ತಪ್ಪ ಇವರು ದಿನಾಂಕ 24-11-2014 ರ ಡಾಕ್ಯುಮೆಂಟ್ ನಂಬರ್:3020/2014-15 ರಂದು ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಬೆಳ್ಳಿಕಟ್ಟೆ ಇವರು ನಮೂನೆ-21 ರ ನೋಟಿಸನ್ನು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಎಂ.ಬಿ.ಅಯ್ಯನಹಳ್ಳಿ ಗ್ರಾಮದ ಶ್ರೀಮತಿ.ಮಾರೆಕ್ಕ ಗಂಡ ಪೆನ್ನಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದೆಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 16-04-2015 ರಂದು ವಿಚಾರಣೆ ಮಾಡಲಾಯಿತು.

ವಿಚಾರಣೆಯ ಸಮಯದಲ್ಲಿ ಅರ್ಜಿದಾರರು ಹಾಗು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಕೂಡ್ಲಿಗಿ ತಾಲೂಕು ಬೆಳ್ಳಿಕಟ್ಟೆ ಗ್ರಾಮದ ಸನಂ 401/3. ವಿಸ್ತೀರ್ಣ 2-50. ಎಕರೆ ಜಮೀನನ್ನು ಸದರಿ ತಾಲೂಕು ಎಂ.ಬಿ.ಅಯ್ಯನಹಳ್ಳಿ ಗ್ರಾಮದ ಗೊಲ್ಲರ ಈರಪ್ಪ ತಂದೆ ಗೊಲ್ಲರ ಈರಪ್ಪ ಇವರಿಂದ ದಿನಾಂಕ 24-11-2014 ರ ಡಾಕ್ಯುಮೆಂಟ್ ನಂಬರ್:3020/2014-15 ರಂದು ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿರುತ್ತಾರೆ. ಸದರಿ ನೊಂದಣಿ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನಿಗೆ ಸಂಬಂದಿಸಿದಂತೆ ತಕರಾರುದಾರರು ತಕರಾರು ಅರ್ಜಿಯನ್ನು ವಾಪಸ್ಸು ಪಡೆಯುವುದಾಗಿ ಒಪ್ಪಿಗೆ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ಹಾಗೂ ತಕರಾರುದಾರರ ಹೇಳಿಕೆ ಗಳನ್ನು ಕೇಳಿ ತಕರಾರುದಾರರು ತಕರಾರು ಅರ್ಜಿಯನ್ನು ವಾಪಸ್ಸ ಪಡೆದಿರುವುದಾಗಿ ಒಪ್ಪಿಗೆ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಸ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಬೆಳ್ಳಿಕಟ್ಟೆ ಗ್ರಾಮದ ಸನಂ 401/3. ವಿಸ್ತೀರ್ಣ 2-50. ಎಕರೆ ಜಮೀನನ್ನು ದಿನಾಂಕ 24-11-2014 ರ ಡಾಕ್ಯುಮಂಟ್ ನಂಬರ್:3020/2014 ರ ಕ್ರಯದಸ್ತಾವೇಜು ಪ್ರಕಾರ ಹಾಗೂ ಕ್ರಯದಾರರಾದ ಹಾಗೂ ಅರ್ಜಿದಾರರಾದ ಜಿ.ಕೆ.ಮಹೇಶ ತಂದೆ ಜಿ.ಚಿತ್ತಪ್ಪ ಎಂ.ಬಿ.ಅಯ್ಯನಹಳ್ಳಿ ಗ್ರಾಮ. ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 16-04-2015. ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಜಿ.ಕೆ.ಮಹೇಶ ತಂದೆ ಜಿ.ಚಿತ್ತಪ್ಪ, ಗೊಲ್ಲರ ಈರಪ್ಪ ತಂದೆ ಗೊಲ್ಲರ ಈರಪ್ಪ ಎಂ.ಬಿ.ಅಯ್ಯನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಶ್ರೀಮತಿ.ಮಾರೆಕ್ಕ ಗಂಡ ಪೆನ್ನಪ್ಪ ಎಂ.ಬಿ.ಅಯ್ಯನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕೆ ಕಳುಹಿಸಿ ಕೊಡಲಾಗಿದೆ.

3/7/16
ದಿನಾಂಕ :